ಶ್ರೀ ಕೆ. ಹೆಚ್. ಪಾಟೀಲ್.—ಲಾಟರಿ ಯೋಜನೆ ವಿಚಾರದಲ್ಲಿ ಯಾವುದೇ ಆಜ್ಞೆ ಕೊಡಿ. ಆದರೆ, ಕಿತ್ತೂರು ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ನಿಮ್ಮ ಆಜ್ಞೆ ಗಂಟು ಬಿದ್ದಿರುವುದು ಉತ್ತರ ಕರ್ನಾಟಕದ ಜನತೆಯಲ್ಲಿ ಕ್ಷೋಭೆ ಉಂಟು ಮಾಡಿದೆ. ಈ ರೀತಿ ತಡೆಯಾಜ್ಞೆ ಕೊಡುವುದಕ್ಕೆ ಯಾರಾದರೂ ಮಂತ್ರಿಗಳ ಕೈವಾಡ ಇದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ರಾಣಿ ಕಿತ್ತೂರು ಚೆನ್ನಮ್ಮನವರ ಪುತ್ಥಳಿಯನ್ನು ಸ್ಥಾಪಿಸುವುದಕ್ಕೆ ನಾವೆಲ್ಲಾ ಪೂರ್ಣ ಸಹಕಾರವನ್ನು ಕೊಡುತ್ತೇವೆ. ಸ್ಥಳೀಯವಾಗಿ ಎಲ್ಲಿ ಅವನ್ನು ಸ್ಥಾಪನೆ ಮಾಡಬೇಕೆಂದು ಒಂದು ಪ್ರಶ್ನೆ ಬಂದಿದೆ. ಕಿತ್ತೂರು ರಾಣಿ ಚೆನ್ನಮ್ಮನ ವೃತ್ತದಲ್ಲಿಡಬೇಕೆಂದು ಮೊದಲು ತೀರ್ಮಾನ ಮಾಡಿದ್ದೆವು. ಕಾರಣಾಂತರದಿಂದ ಅಲ್ಲಿ ಏನಾಗಿದೆ ಅಂದರೆ ಟ್ರಾಫಿಕ್ ಜಾಸ್ತಿ ಇರುವ ಕಾರಣ, ವಾಹನಗಳ ಒತ್ತಡ ಇರುವ ಕಾರಣ, ಟ್ರಾಫಿಕ್ ಲೈಟ್ ಬರುವುದರಿಂದ, ಪೋಲಿಸ್ ಇಲಾಖೆಯವರು ಅಲ್ಲಿ ಪುತ್ಥಳಿ ಇಡುವುದು ಸರಿಯಲ್ಲ ಎಂದು ಪರಿಶೀಲನೆಯನ್ನು ಕೊಟ್ಟಿರುವುದರಿಂದ ಆ ಸ್ಥಳ ಬದಲಾವಣೆ ಮಾಡಬೇಕೆಂದು ಏನು ಕ್ರಮ ತೆಗೆದುಕೊಂಡಿದ್ದೇವೆ, ಅದರ ಬಗ್ಗೆ ಕೆಲವು ಸ್ಥಳೀಯರು ಸ್ಥಳ ಬದಲಾವಣೆ ಮಾಡಬಾರದು ಇರತಕ್ಕ ಸ್ಥಳದಲ್ಲಿಯೇ ಪುತ್ಥಳಿ ಇಡಬೇಕೆಂದು ಇರುವುದರಿಂದ ಅದರ ಬಗ್ಗೆ ಪೂರ್ಣವಾಗಿ ವಿಚಾರಣೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಮುಂದೂಡಿದ್ದೇವೆ ಅಷ್ಟೇ ಹೊರತು ಅದನ್ನು ರದ್ದು ಮಾಡಿಲ್ಲ.

ಶ್ರೀ ಬಿ.ಎಂ. ಹಿಂಡಸಗೇರಿ.—ಕಿತ್ತೂರು ರಾಣಿ ಚೆನ್ನಮ್ಮನವರ ಪುತ್ಥಳಿಯನ್ನು ಸ್ಥಾಪನೆ ಮಾಡುವ ಬಗ್ಗೆ ಈಗಾಗಲೇ ೫೦ ಸಾವಿರ ರೂಪಾಯಿ ಖರ್ಚು ಮಾಡಿ ೧೦ ಅಡಿ ಆಳದವರೆಗೆ ಒಂದು ಬೆಡ್ ಹಾಕಲಾಗಿದೆ. ಅದರ ಸ್ಥಾಪನೆಗೋಸ್ಕರ ಲಾಟರಿ ಯೋಜನೆಯನ್ನು ಕೈಗೊಂಡು ಸಾಕಷ್ಟು ಲಾಟರಿ ಟಿಕೆಟ್ ಮಾರಲಾಗಿದೆ. ಕರ್ನಾಟಕ ಸ್ಪೆಷಲ್ ಲಾಟರಿ ಆಕ್ಟ್ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ೫೦ ಸಾವಿರ ರೂಪಾಯಿ ಖರ್ಚು ಮಾಡಿ ಈ ಪುತ್ಥಳಿಯನ್ನು ಸ್ಥಾಪನೆ ಮಾಡಲಿಕ್ಕೆ ೧೦ ಅಡಿಯವರೆಗೆ ಆಳ ಮಾಡಿ ಒಂದು ಬೆಡ್ ಕೂಡ ತಯಾರಿಸಲಾಗಿದೆ. ಈ ಬಗ್ಗೆ ಲಾಟರಿ ಯೋಜನೆಯಿಂದ ಸಾಕಷ್ಟು ಲಾಟರಿ ಟಿಕೆಟ್‌ಗಳನ್ನು ಮಾರಲಾಗಿದ್ದರೂ ಕಾಯಿದೆ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ, ಸಾರ್ವಜನಿಕರು ಯಾರಾದರೂ ಮಾಡಿದರೆ ಅವರ ಮೇಲೆ ಕೇಸ್ ಹಾಕುವಂತಾದ್ದು ಇರುವಾಗ, ಇವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂತಾದ್ದು ಸತ್ಯಕ್ಕೆ ದೂರವಾದುದು. ಲಾಟರಿ ಟಿಕೆಟ್ ಯೋಜನೆಯನ್ನು ಮುಂದುವರಿಸಬಾರದು ಎಂದು ನಾವು ಹೇಳಿದ್ದೇವೆ. ಮಾನ್ಯ ಸದಸ್ಯರು ಕಾಯಿದೆ ಉಲ್ಲಂಘನೆಯಾಗಿದೆ. ಕಾಯಿದೆ ಪ್ರಕಾರ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ಕಾಯಿದೆ ಉಲ್ಲಂಘನೆಯಾಗಿದ್ದರೆ ಕ್ರಮವನ್ನು ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ. ಇನ್ನು ಪುತ್ಥಳಿಯ ಬಗ್ಗೆ ಸ್ಥಳದಲ್ಲಿರತಕ್ಕೆ ನಾಗರೀಕರು ಯಾವ ಸ್ಥಳದಲ್ಲಿ ಸ್ಥಾಪನೆ ಮಾಡಬೇಕೆಂದು ಅಭಿಪ್ರಾಯ ಪಡುತ್ತಾರೋ ಅಲ್ಲಿ ಸ್ಥಾಪನೆ ಮಾಡುತ್ತೇವೆ.

ಶ್ರೀನಿವಾಸಪುರ ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯಿತಿಗಳ ಹಣಕಾಸುಸ್ಥಿತಿ

೬೨. (೧೪೪) ಶ್ರೀ ರಮೇಶ್ ಕುಮಾರ್ (ಶ್ರೀನಿವಾಸ ಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಆಡಳಿತ ಅಧಿಕಾರಿಗಳು ಶ್ರೀನಿವಾಸಪುರ ತಾಲ್ಲೂಕಿನ ಗ್ರಾಮ ಪಂಚಾಯ್ತಿಗಳನ್ನು ವಶಕ್ಕೆ ತೆಗೆದುಕೊಂಡ ದಿನಾಂಕದಿಂದ ಆ ಪಂಚಾಯ್ತಿಗಳ ವಶಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ?

ಆ) ಈ ಪಂಚಾಯ್ತಿಗಳನ್ನು ಮಂಡಲ ಪಂಚಾಯಿತಿಗಳ ಅಡಿಯಲ್ಲಿ ತಂದ ನಂತರ ಅವುಗಳ ಆರ್ಥಿಕ ಪರಿಸ್ಥಿತಿ.

ಇ) ವಿವಿಧ ಗ್ರಾಮ ಪಂಚಾಯಿತಿಗಳ ಆಡಳಿತ ಅಧಿಕಾರಿಗಳು ಗ್ರಾಮ ಪಂಚಾಯ್ತಿಗಳು ಮಂಡಲ ಪಂಚಾಯ್ತಿಗಳಾಗಿ ಪರಿವರ್ತನೆ ಹೊಂದಿ ಅವುಗಳ ಚುನಾಯಿತ ಸದಸ್ಯರು ಅಧಿಕಾರವನ್ನು ವಹಿಸಿಕೊಳ್ಳುವ ಮಧ್ಯಂತರ ಅವಧಿಯಲ್ಲಿ ಈ ಪಂಚಾಯ್ತಿಗಳ ಎಲ್ಲಾ ಹಣವನ್ನು ವಾಸ್ತವವಾಗಿ ಹೀರುಗೊಳಿಸಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಅನುಬಂಧ ೧ರ ಕಾಲಂ ೩ರಲ್ಲಿ ನಮೂದಿಸಲಾಗಿದೆ.

ಆ) ಅನುಬಂಧ ೧ರ ಕಾಲಂ ೪ರಲ್ಲಿ ನಮೂದಿಸಲಾಗಿದೆ.

ಇ) ಇಲ್ಲ.

ANNEXURE-I

Sl. No.	Name of the Ex-Villages	Balance when Administraters took charge	Balance when Mandals were found
1	2	3	4
1	Nambihalli	5,678.23	4,658.83
2	Kallur	27,549.88	4,722.41
3	Thaldiganehalli	931.41	5,572.79
4	K. Thimmasadra	2,338.83	3,120.50
5	Paliya	1,420.84	2,633.70
6	Hosahalli	1,460.49	3,097.59
7	Kernhalli	89.66	6,328.87
8	Gandlahalli	1,640.98	6,267.47
9	Dalasanur	5,934.85	3,434.61
10	Kodikerun	571.06	3,411.73
11	Hebbata	3,420.17	1,762.77
12	Yeldura	10,305.36	10,092.07
13	Hogalegeri	12,742.85	10,113.45
14	Mutukapalli	59.26	6,465.09
15	Kolthura	270.21	3,877.10
16	Yedaruru	338.50	3,360.30
17	Lakshisagar	199.11	3,983.37
18	Kasathipalli	1,130.66	5,249.19
19	Pathanelviki	2,041.47	5,236.15
20	Manchilkoth	664.03	3,536.20
21	Lakshipura	7,184.30	3,634.64
22	Jinkalawannalli	1,646.60	4,564.12
23	Pulgadakoth	2,732.00	8,355.86
24	R. Thimmasandra	822.88	6,100.82
25	Nagadenahalli	2,946.59	7,864.52
26	Marijganahalli	98.10	4,287.49
27	Dorigol	446.34	4,004.54
28	Beluru	3,351.12	4,074.21
29	Dimbala	2,923.11	4,786.41
30	Nimarakunta	2,031.66	8,058.27

1	2	3	4
31	Begalapelli	246 20	10,160.70
32	Surgapallapalli	881.49	8,114.19
33	Motakapasandra	1,224.19	5,836.29
34	Mudimalagu	10,535.34	3,366.25
35	Y.M. Thungapalli	1,035.90	2,224.00
36	Rayalplad	18,053.49	3,730.05
37	Yeranavadipalli	428.35	2,543.47
38	Addegal	10,035.63	3,489.91
39	Vamp lli	6,888.10	7,931.31
40	Koorg palli	446.90	2,878.35
41	Gasnipalli	7,602.40	21,806.17
42	Kodipalli	3,670.60	7,237.00
43	Byreganapalli	54.08	7,127.93
44	Yachanapalli	14,591.20	9,251.05

ಶ್ರೀ ಯು. ಭೂಪತಿ (ಶ್ರೀ ರಮೇಶ್‌ಕುಮಾರ್ ಅವರ ಪರವಾಗಿ).—ಅಧ್ಯಕ್ಷರೆ. ಮುಂಡಲ್ ಪಂಚಾಯಿತಿಗಳು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಹಳೆಯ ಪಂಚಾಯಿತಿಗಳು ಇದ್ದವು. ಈಗಿನ ಒಂದು ಮುಂಡಲ್ ಪಂಚಾಯಿತಿಗೆ ಹಿಂದಿನ ನಾಲ್ಕೈದು ಪಂಚಾಯಿತಿಗಳು ಇರುತ್ತಿದ್ದವು. ಅಡ್ಮಿನಿಸ್ಟ್ರೇಟರ್ ಎಂದು ನೇಮಕ ಮಾಡಿದರು, ಹಳೆಯ ಪಂಚಾಯಿತಿಗಳಲ್ಲಿದ್ದಂಥ ಅಧ್ಯಕ್ಷರು ಹಣವನ್ನು ಕೂಡಿಸಿ ಪಂಚಾಯಿತಿಗಳಲ್ಲಿ ಇಟ್ಟಿದ್ದರು. ಅಡ್ಮಿನಿಸ್ಟ್ರೇಟರ್ ಎಂದು ಬಂದಿರುವವರು ಯದ್ವಾತದ್ವಾ ಖರ್ಚು ಮಾಡಿದ್ದಾರೆ ಎನ್ನುವುದೇ ಈ ಪ್ರಶ್ನೆಯ ಉದ್ದೇಶ. ಈಗ ಮುಂಡಲ್ ಪಂಚಾಯಿತಿಗಳಿಗೆ ಕಾರ್ಯದರ್ಶಿ ಎಂದು ನೇಮಕ ಮಾಡಿದ್ದೀರಿ. ಅಲ್ಲಿ ಹಣಕಾಸಿನ ಅಪವ್ಯಯ ಗಿಲ್ಲವೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮುಂಡಲ್ ಪಂಚಾಯಿತಿಗಳು ಬರುವುದಕ್ಕೆ ಮುಂಚೆ ಇದ್ದ ಪಂಚಾಯಿತಿಗಳು ಅದರಲ್ಲಿದ್ದಂಥ ಹಣವನ್ನು ದುರುಪಯೋಗ ಮಾಡಿದ್ದಾರೆ ಎನ್ನುವುದು ಮಾನ್ಯ ಸದಸ್ಯರ ಶಂಕೆಯಾಗಿದೆ. ನಾನು ಕೊಟ್ಟರತಕ್ಕ ಅನುಬಂಧದಲ್ಲಿ ೭ ಗ್ರಾಮಗಳನ್ನು ಬಿಟ್ಟರೆ ಹೆಚ್ಚು ಕಡಿಮೆ ಮುಂಡಲ್ ಪಂಚಾಯಿತಿ ಹಣಕ್ಕಿಂತಲೂ ಹೆಚ್ಚಿನ ಹಣ ವರ್ಗಾವಣೆ ಆಗಿದೆ. ೭ ಗ್ರಾಮಗಳಲ್ಲಿ ಮುಂಡಲ್ ಪಂಚಾಯಿತಿಗಳಲ್ಲಿ ಹೆಚ್ಚು ಹಣ ವೆಚ್ಚವಾಗಿದೆ. ಒಂದು ವೇಳೆ ದುರುಪಯೋಗವಾಗಿದೆ ಯೆಂದು ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಿದ್ದರೆ ಅದರ ಮಾಹಿತಿಯನ್ನು ನನಗೆ ಕೊಟ್ಟರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಯಾವ ಪ್ರಶ್ನೆಗೆ ಉತ್ತರ ಕೊಡ ತ್ತಿದ್ದಾರೋ ಗೊತ್ತಿಲ್ಲ ಇಂಗ್ಲೀಷ್‌ನಲ್ಲಿ ಕೇಳಿರತಕ್ಕ ಪ್ರಶ್ನೆ ಸರಿಯಾಗಿದೆ. ಆದರೆ ಇದನ್ನು ಕನ್ನಡಕ್ಕೆ ತರ್ಜುಮೆ ಮಾಡಿದಾಗ ತಪ್ಪಾಗಿದೆ. ''ವಿವಿಧ ಗ್ರಾಮ ಪಂಚಾಯಿತಿಗಳಲ್ಲಿನ ಗ್ರಾಮಾಧಿ ಕಾರಿಗಳು ಬಹುಮಟ್ಟಿಗೆ ಎಲ್ಲ ಹಣವನ್ನೂ ವಾಸ್ತವವಾಗಿ ವ್ಯಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ'' ಎಂದು. ಇದರಲ್ಲಿ ಕನ್ನಡದಲ್ಲಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೋ? ಅಥವಾ ಇಂಗ್ಲೀಷ್‌ನಲ್ಲಿರತಕ್ಕ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೋ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ರಮೇಶ್‌ಕುಮಾರ್‌ರವರು ಬಂದು ಅದನ್ನು ಕೇಳಿಕೊಳ್ಳುತ್ತಾರೆ. ಮುಂದಿನ ಪ್ರಶ್ನೆ ತೆಗೆದುಕೊಳ್ಳಿರಿ.

ಪುರಸಭೆಗಳ ಚುನಾವಣೆಯನ್ನು ಮುಂದೂಡುವ ಬಗ್ಗೆ

೪೩ (೨೨) (೩) ಶ್ರೀ ಕೆ.ಹೆಚ್. ಪಾಟೀಲ್ (ಗದಗ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ಪುರಸಭೆ ಚುನಾವಣೆಗಳನ್ನು ಮುಂದೂಡಲು ಕಾರಣಗಳಾವುವು?